ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ ವಿಷಯ ಇದು ಅಲ್ಲ. ಹೈಸ್ಕೂಲುಗಳಲ್ಲಿ ಕನ್ನಡ ಪಾಠ ಹೇಳತಕ್ಕವರು ಸಾಕಾದಷ್ಟು ಜನ ಉಪಾಧ್ಯಾಯರು ಇಲ್ಲದೇ ಇರುವಾಗ ಬೇರೆ ಏನಾದರೂ ಏರ್ಪಾಡು ಮಾಡಿದ್ದೀರಾ ಅದನ್ನಾದರೂ ಹೇಳಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮ್ಮ ಸರ್ಕಾರಿ ಹೈಸ್ಕೂಲುಗಳಲ್ಲಿ ಅಂತಹ ಕೊರತೆ ಇಲ್ಲ. ಆದರೆ ಖಾಸಗಿ ಹೈಸ್ಕೂಲುಗಳಲ್ಲಿ ಕೊರತೆ ಕಂಡುಬಂದಿದೆ, ಅದನ್ನು ನಿವಾರಿಸುವುದಕ್ಕೆ ಈಗಾಗಲೇ ಯೂನಿವರ್ಸಿಟಿಯಲ್ಲಿ ಅನೇಕ ಜನ ಗ್ರಾಜ್ಯುಯೇಟ್ಸ್ ಪಾಸ್ ಆಗಿ ಬರುತ್ತಾ ಇದ್ದಾರೆ. ಸುಮಾರು 40-50 ಜನ ಪ್ರತಿ ಸಾರಿ ಪಾಸ್ ಆಗುತ್ತಾ ಇದ್ದಾರೆ, ಆದ್ದರಿಂದ ಇನ್ನು ಕೆಲವೇ ದಿನಗಳಲ್ಲಿ ಆ ಕೊರತೆ ನಿವಾರಣೆಯಾಗಬಹುದು ಎಂಬ ವಿಶ್ವಾಸ ಇದೆ.

ಶ್ರೀ ಸಿ. ಆರ್. ರಂಗೇಗೌಡ.—ಕನ್ನಡ ಪಂಡಿತರ ಅಭಾವ ಇದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಎಷ್ಟು ಜನ ಉಪಾಧ್ಯಾಯರ ಸ್ಥಳ ಖಾಲಿ ಇದೆ ? ಪ್ರತಿ ವರ್ಷ 40 ಜನ ಉಪಾಧ್ಯಾಯರು ಸಿಕ್ಕುವುದಾದರೆ ಎಷ್ಟು ವರ್ಷದಲ್ಲಿ ಈ ಹೈಸ್ಕೂಲುಗಳಿಗೆ ಕನ್ನಡ ಉಪಾಧ್ಯಾಯರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರಿ ಹೈಸ್ಕೂಲುಗಳಲ್ಲಿ ಕೊರತೆ ಇಲ್ಲ. ಖಾಸಗಿ ಹೈಸ್ಕೂಲುಗಳಲ್ಲಿ ಕೊರತೆ ಇದೆ. ಆದರೆ ಅದನ್ನು ಸರ್ವೆ ಮಾಡುವುದಕ್ಕೆ ಕಷ್ಟವಾಗುತ್ತದೆ, ನಿರ್ದಿಷ್ಟವಾಗಿ ಇಷ್ಟೇ ಅಂತ ಹೇಳುವುದಕ್ಕೆ ಸಾಧ್ಯವಿಲ್ಲ.

Encroachment on B. H. Road

135. Sri K. M. THAMMAIAH (Kadur).—

Will the Minister for Revenue be pleased to state:—

(*a*) whether the old deviation B. H. Road (Bangalore-Honnavar Road) has been encroached upon by the Ex-President of Kadur Municipality;

(*b*) whether this encroachment has not obstructed the path to the Malleswaram temple which belongs to the Muzrai Department;

(*c*) if so, the action taken to clear, the obstruction and restore the path to the temple ?

Sri H. V. KOJUALGI (Minister for Revenue).—

(*a*) Yes. By one Sri K. R. Honnappa.

(*b*) Yes. The path Leading to the Arekal Bhuvaneswari temple (Not to the Malleswaram temple) is in the encroached portion. But, however, the devotees are making use of alternative path adjacent to the Railway track.

(*c*) Action is being taken to evict the encroacher.

ಶ್ರೀ ಕೆ. ಎಂ. ತಮ್ಮಯ್ಯ.—ತಾವು ಕೊಟ್ಟ ಉತ್ತರದಲ್ಲಿ ಮಲ್ಲೇಶ್ವರ ದೇವಸ್ಥಾನ ಎಂದು ಕೇಳಿದ್ದಕ್ಕೆ, ಮಲ್ಲೇಶ್ವರ ದೇವಸ್ಥಾನ ಅಲ್ಲ, ಭುವನೇಶ್ವರಿ ದೇವಸ್ಥಾನ ಎಂದು ಹೇಳಿದ್ದೀರಿ, ಭುವನೇಶ್ವರಿ ದೇವಸ್ಥಾನವೇ ಇಲ್ಲ, ಇಂತಹ ನುಳ್ಳು ಉತ್ತರ ಕೊಟ್ಟಿದ್ದೀರಲ್ಲಾ ?

† Sri H. V. KOUJALGI.—Whether it is Malleswara Temple or Bhuvaneswari temple, it is all the same. But the path to the temple is encroached and the devotees are making use of the other alternative road.

ಶ್ರೀ ಎಸ್. ಎಚ್. ತಮ್ಮಯ್ಯ.—ಇದು 8 ವರ್ಷಗಳ ಹಿಂದೆಯೇ ಒತ್ತುವರಿಯಾಗಿದ್ದು ಈ ವಿಚಾರವನ್ನು ಹಿಂದಿದ್ದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಮತ್ತು ಹಾಲಿ ಇರತಕ್ಕ ಮುಖ್ಯ ಮಂತ್ರಿಗಳ ಗಮನಕ್ಕೂ ತರಲಾಗಿದೆ. ಕಳೆದ ಶಿವರಾತ್ರಿಯಲ್ಲಿ ಅಲ್ಲಿ ದೇವಾಲಯದಲ್ಲಿ ಪೂಜಾ ಕಾರ್ಯ ನಡೆಯುತ್ತಿರಲಿಲ್ಲ. ಈ ಒತ್ತುವರಿಯನ್ನು ಇನ್ನು ಯಾವಾಗ ತೀರ್ಮಾನ ಮಾಡುತ್ತೀರಾ ?

Sri H. V. KOUJALGI.—The matter has been heard by my predecessor and after hearing it was found some more material was necessary and the Assistant Commissioner has been directed to make a spot inspection and report the matter. The matter is still pending and steps will be taken to finalise the matter.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಆ ಒತ್ತುವರಿ ಜಾಗ ಮುಜರಾಯಿ ಇಲಾಖೆಗೆ ಸೇರಿದ್ದೋ ಅಥವಾ ಸರ್ಕಾರಕ್ಕೆ ಸೇರಿದ್ದೋ ?

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರಕ್ಕೆ ಸೇರಿದ್ದು.

ಶ್ರೀ ಶಿವಣ್ಣ.—ಅಲ್ಲಿ ಆ ಒತ್ತುವರಿ ಜಾಗದಲ್ಲಿ 10 ವರ್ಷಗಳಿಂದಲೂ ಅಡಕೆ ತೋಟವನ್ನು ಬೆಳೆಸಿಕೊಂಡು ಬಂದಿದ್ದಾರೆ. ಈಗ ಅದನ್ನು ಹೇಗೆ ಬಿಡಿಸಿಕೊಳ್ಳುವುದು ?

Sri H. V. KOUJALGI.—It has not come to the notice of the Government. There is nothing on record also to show that plantation has taken place there.

ಶ್ರೀ ಎನ್. ಜಿ. ಹಾಲಪ್ಪ.—ಸರ್ಕಾರಕ್ಕೆ ಸೇರಿರತಕ್ಕ ಎಷ್ಟು ರಸ್ತೆಯನ್ನು ಆತ ಆಕ್ರಮಿಸಿದ್ದಾನೆ ? ಅಲ್ಲ ಅನಧಿಕೃತವಾಗಿ ಆತನು ಬೆಳೆಸಿರತಕ್ಕ ತೋಟದ ವಿಸ್ತೀರ್ಣವೆಷ್ಟು ? ಹಾಗೆ ಒಂದು ವೇಳೆ ಅಕ್ರಮವಾಗಿ ಆ ತೋಟವನ್ನು ಬೆಳೆಸಿರತಕ್ಕ ಜಾಗವನ್ನು ಸರ್ಕಾರದವರು ಬೇರೆ ಯಾರಿಗೂ ಕೊಡದಂಥ ಪರಿಸ್ಥಿತಿಯಿದ್ದರೆ ಆ ಭೂಮಿಯನ್ನು ಆ ರೈತನಿಗೇಕೆ ಕೊಡಬಾರದು ?

Sri H. V. KOUJALGI.—The area that is encroached is only 28 guntas. It is a fact that it is an adjacent land. But the question as to whether it should be sold in public auction or otherwise is still under consideration.

Bridges along Sagar-Kagar-Tumri Road in Sagar Taluk

164. Sri K. H. SRINIVASA (Sagar).—

Will the Minister for Public Works be pleased to state:—

(*a*) the number of bridges which are found weak and dangerous along the Sagar-Kogar-Tumri Road in Sagar Taluk ;

(*b*) the action that has been taken in respect of them ;

(*c*) whether it is not a fact that these bridges were completed only in 1964 ;

(*d*) whether any action has been taken on the officers and the contractor responsible for the bad workmanship which had caused the collapse of bridges along this road ;

(*e*) whether Government consider the introduction of a guarantee clause in Public Works Department contract agreement in view of the bad workmanship and consquent short life of some completed works ?